## 2016 ಕ.ತೀ.ವ 1473

**(ಧಾರವಾಡ ಪೀಠ)**

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್**

**ಶ್ರೀ ಶಿವಶಂಕರ್ ಚಂದ್ರಶೇಖರ್ ಜೊಟಾವರ –ವಿರುದ್ಧ– ಶ್ರೀಮತಿ ಪೂರ್ಣಿಮಾ ಶಿವಶಂಕರ್ ಜೊಟಾವರ್ ಮತ್ತು ಇತರರು***

ಸೆಕ್ಷನ್ 125 ದಂಡ ಪ್ರಕ್ರಿಯಾ ಸಂಹಿತೆ ಮತ್ತು ಸೆಕ್ಷನ್ 126 ಮತ್ತು ಸೆಕ್ಷನ್ 67 ದಂಡ ಪ್ರಕ್ರಿಯಾ ಸಂಹಿತೆ.

ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರನಿಗೆ ಸೂಕ್ತವಾದ ನೋಟೀಸ್ ಜಾರಿಯಾಗದ ಸಂದರ್ಭದಲ್ಲಿ, ಆತನನ್ನು ಎಕ್ಸ್ ಪಾರ್ಟಿ ಎಂದು ಪರಿಗಣಿಸಿ ಆದೇಶ ಮಾಡಿದ ಕೆಳ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಲಾಗಿದೆ.

ಕೆಳನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆ ಸೆಕ್ಷನ್ 125ರ ಅಡಿ ದಾಖಲಿಸಿದ ಜೀವನಾಂಶ ಕುರಿತು ಪ್ರಕರಣದಲ್ಲಿ ಅರ್ಜಿದಾರನಿಗೆ ಕಳುಹಿಸಿದ ನ್ಯಾಯಾಲಯದ ನೋಟೀಸಿನ ಮೇಲೆ 'ತಿರಸ್ಕರಿಸಿದೆ' ಎಂಬ ಅಂಚೆ ಷರಾವನ್ನು ಗಮನಿಸಿ ಆತನನ್ನು ಎಕ್ಸ್ ಪಾರ್ಟಿ ಎಂದು ಪರಿಗಣಿಸಿ ಪ್ರಕರಣವನ್ನು ಮುಂದುವರಿಸಿ ಆದೇಶ ನೀಡಿದೆ.

ಪ್ರಸ್ತುತ ಅರ್ಜಿದಾರನು ಈ ಆದೇಶವು ಕಾನೂನಿನ ಈ ಅಂಶಗಳಡಿ ಸೂಕ್ತವಲ್ಲ ಎಂದು ಪ್ರಶ್ನಿಸಿದ್ದಾನೆ:–

1. ದಂಡ ಪ್ರಕ್ರಿಯಾ ಸಂಹಿತೆ 67ರ ಅಡಿ ಸೂಕ್ತವಾದ ನೋಟೀಸನ್ನು ಆತನಿಗೆ ನೀಡಿಲ್ಲ.

*ಆರ್.ಪಿ.ಎಫ್.ಸಿ. ಸಂಖ್ಯೆ 100062/2016, ದಿನಾಂಕ: 1ನೇ ಸೆಪ್ಟೆಂಬರ್, 2016.

2. ದಂಡ ಪ್ರಕ್ರಿಯಾ ಸಂಹಿತೆ 126ರ ಅಡಿ ಸಾಕ್ಷಿಯನ್ನು ದಾಖಲಿಸಿಕೊಂಡಿಲ್ಲ.

ಮಾನ್ಯ ಉಚ್ಚ ನ್ಯಾಯಾಲಯವು ಈ ಅಂಶಗಳನ್ನು ಪರಿಗಣಿಸಿ ಪ್ರತ್ಯರ್ಜಿದಾರನಿಗೆ ನೋಟೀಸು ನೀಡಿಕೆಯ ಕುರಿತು ಕೆಳನ್ಯಾಯಾಲಯವು ಕಾರಣಗಳನ್ನು ನೀಡದ ಹೊರತು ಆತನನ್ನು ಎಕ್ಸ್ ಪಾರ್ಟಿ ಎಂದು ಪರಿಗಣಿಸಿದ್ದು ಕಾನೂನಿನಡಿ ಸೂಕ್ತವಲ್ಲ ಎಂದು ನಿರ್ಧರಿಸಿದೆ.

ಅಲ್ಲದೇ ದಂಡ ಪ್ರಕ್ರಿಯಾ ಸಂಹಿತೆ 126(2)ರ ಅಡಿ ಪ್ರತ್ಯರ್ಜಿದಾರನನ್ನು ಎಕ್ಸ್ ಪಾರ್ಟಿ ಎಂದು ಪರಿಗಣಿಸುವ ಮೊದಲು ಕೆಳ ನ್ಯಾಯಾಲಯವು ಪ್ರತ್ಯರ್ಜಿದಾರನು ಉದ್ದೇಶಪೂರ್ವಕವಾಗಿಯೇ ನ್ಯಾಯಾಲಯದಲ್ಲಿ ಹಾಜರಾಗಲು ತಪ್ಪಿಸುತ್ತಿದ್ದಾನೆಯೇ ಅಥವಾ ಇಲ್ಲವೇ ಎಂಬುದರ ಕುರಿತು ಸೂಕ್ತ ನಿರ್ಧಾರಕ್ಕೆ ಬರದ ಹೊರತು ಆತನನ್ನು ಎಕ್ಸ್ ಪಾರ್ಟಿ ಎಂದು ಪರಿಗಣಿಸಲು ಬರುವುದಿಲ್ಲ ಎಂದು ನಿರ್ಧರಿಸಿ ಪ್ರಸ್ತುತ ಪ್ರಕರಣವನ್ನು ನೋಟೀಸ್ ನೀಡಿಕೆಯ ಹಂತದಿಂದ ಮರು ಸುನಾವಣೆ ಮಾಡಲು ಕೆಳನ್ಯಾಯಾಲಯಕ್ಕೆ ಆದೇಶಿಸಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾದಲ್ಲಿ***

*1. ಎಐಆರ್ 1963 ಮೈಸೂರು 239*
*ವರದಿಯಾದ ಸರ್ಕಾರ –ವಿರುದ್ಧ–*
*ಭೀಮರಾವ್ ಮತ್ತು ಮತ್ತೊಬ್ಬರು (ಉಲ್ಲೇ) 6*
*2. 1981 ಕೆಎಆರ್ ಎಲ್.ಜೆ. 353*
*ಭೀಮಪ್ಪ ಗಂಗಪ್ಪ –ವಿರುದ್ಧ– ಇಂದಿರಾಬಾಯಿ (ಉಲ್ಲೇ) 6*

ಅರ್ಜಿದಾರರ ಪರ: ಶ್ರೀ ಎಂ.ಜಿ. ನಾಗನೂರಿ, ವಕೀಲರು.
ಪ್ರತ್ಯರ್ಜಿದಾರರ ಪರ: (ನೋಟೀಸ್ ನೀಡಲಾಗಿದೆ).

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್**

ಊರ್ಜಿತತ್ವಕ್ಕೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆಯು 125ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಅರ್ಜಿಗಳಲ್ಲಿ ಕುಟುಂಬ ನ್ಯಾಯಾಲಯಗಳು ಹೊರಡಿಸಿದ ನೋಟೀಸು/ಗಳ ಸೇವೆಗಳಿಗೆ ಸಂಬಂಧಿಸಿದಂತೆ ಈ ಅರ್ಜಿಯು ಒಂದು ಪ್ರಮುಖ ಪ್ರಶ್ನೆಯನ್ನು ಎತ್ತಿರುತ್ತದೆ.

2. ಇಲ್ಲಿನ ಅರ್ಜಿದಾರನು, ಕೌಟುಂಬಿಕ ನ್ಯಾಯಾಲಯ, ಬೆಳಗಾವಿ ಇವರು ಕ್ರಿಮಿನಲ್ ಸಂಕೀರ್ಣ ಸಂ.456/2015ನ್ನು ಅಂಗೀಕರಿಸಿ, 1ನೇ ಪ್ರತ್ಯರ್ಜಿದಾರರಿಗೆ ತಿಂಗಳಿಗೆ 5,000/– ರೂ.ಗಳ ಜೀವನಾಂಶವನ್ನು ಹಾಗೂ 2ನೇ ಪ್ರತ್ಯರ್ಜಿದಾರನಿಗೆ ಆತ ಪ್ರಾಪ್ತ ವಯಸ್ಸಿಗೆ ಬರುವವರೆಗೂ ತಿಂಗಳಿಗೆ 1000ರೂ.ಗಳ ಹಾಗೂ 3ನೇ ಪ್ರತ್ಯರ್ಜಿದಾರಳಿಗೆ ಆಕೆ ವಿವಾಹವಾಗುವ ದಿನದವರೆಗೂ 1000/– ರೂ.ಗಳ ಜೀವನಾಂಶವನ್ನು ನೀಡಬೇಕೆಂಬ ಐತೀರ್ಪನ್ನು ನೀಡಿರುವ ಆದೇಶವನ್ನು ಪ್ರಶ್ನಿಸಿರುತ್ತಾರೆ.

3. ಪ್ರತ್ಯರ್ಜಿದಾರರಿಗೆ ನೋಟೀಸನ್ನು ಜಾರಿಗೊಳಿಸಿದ್ದಾಗ್ಯೂ, ಅವರು ಗೈರು ಹಾಜರಾಗಿರುತ್ತಾರೆ.

4. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದಡಿಯಲ್ಲಿ ಪ್ರತ್ಯರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ನೋಂದಣಿ ಮಾಡಿಕೊಳ್ಳಲಾಯಿತು ಹಾಗೂ ಮುಖ್ಯ ಅರ್ಜಿ ಮತ್ತು ಐ.ಎ.ಸಂ.2ನ್ನು ಕುರಿತ ನೋಟೀಸುಗಳನ್ನು 29.10.2015ನೇ ದಿನಾಂಕದ ಆದೇಶದ ಮೇರೆಗೆ ನ್ಯಾಯಾಲಯ ಹಾಗೂ ಆರ್‌ಪಿಎಡಿಯ ಮೂಲಕ ಹೊರಡಿಸಲಾಗಿರುತ್ತದೆ. ತದನುಸಾರವಾಗಿ ನೋಟೀಸನ್ನು 11.11.2015ರಂದು ಆರ್‌ಪಿಎಡಿ ಮೂಲಕ ನೀಡಲಾಗಿರುತ್ತದೆ. 10.12.2015ರಂದು ನಡೆದ ನಡಾವಳಿಗಳಲ್ಲಿ, ಅಧಿವಿಚಾರಣಾ ನ್ಯಾಯಾಲಯವು, ಆರ್‌ಪಿಎಡಿ ಮೂಲಕ ಅರ್ಜಿದಾರರಿಗೆ ಕಳುಹಿಸಿದ

ನೋಟೀಸನ್ನು ಅರ್ಜಿದಾರರು 'ನಿರಾಕರಿಸಿರುತ್ತಾರೆ' ಎಂಬ ಅಂಚೆಯ ಹಿಂಬರಹದೊಂದಿಗೆ ಹಿಂದಿರುಗಿಸಲಾಗಿದೆಯೆಂದು ಟಿಪ್ಪಣಿ ಮಾಡಿಕೊಂಡಿರುತ್ತದೆ. ತದನುಸಾರವಾಗಿ, ಇವರನ್ನು ಏಕಪಕ್ಷಕಾರರನ್ನಾಗಿ ಮಾಡಿಕೊಂಡು, ವಿಷಯವನ್ನು ಸಾಕ್ಷಿಯಾಗಿ ನಿಯೋಜಿಸಲಾಗಿರುತ್ತದೆ. ತರುವಾಯ, ಸಾಕ್ಷ್ಯವನ್ನು ದಾಖಲಿಸಿಕೊಂಡು ಪ್ರಶ್ನಿತ ಆದೇಶವನ್ನು ಹೊರಡಿಸಲಾಗಿರುತ್ತದೆ.

5. ಪ್ರಶ್ನಿತ ಆದೇಶದ ಸಿಂಧುತ್ವವನ್ನು ನಿರಾಕರಿಸಿ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಂ.ಜಿ. ನಾಗನೂರಿರವರು ಪ್ರಶ್ನಿತ ಆದೇಶವು, ಎರಡು ವ್ಯಾಜ್ಯಾಂಶಗಳ ಮೇಲೆ ಕಾನೂನಿನಲ್ಲಿ ಸಮರ್ಥನೀಯವಾಗಿರುವುದಿಲ್ಲ. ಮೊದಲಿಗೆ, ದಂಡ ಪ್ರಕ್ರಿಯಾ ಸಂಹಿತೆಯ 67ನೇ ಪ್ರಕರಣದಡಿಯಲ್ಲಿ ಗೊತ್ತುಪಡಿಸಿದ ರೀತಿಯಲ್ಲಿ ಅರ್ಜಿದಾರರಿಗೆ ನೋಟೀಸನ್ನು ನೀಡಿರುವುದಿಲ್ಲ. ಎರಡನೆಯದಾಗಿ, ದಂಡ ಪ್ರಕ್ರಿಯಾ ಸಂಹಿತೆಯ 126ನೇ ಪ್ರಕರಣದಡಿಯಲ್ಲಿ ಗೊತ್ತುಪಡಿಸಲಾದಂತೆ ದಾಖಲಿಸಿಕೊಂಡಿರುವುದಿಲ್ಲ.

6. ಇವರು ತಮ್ಮ ವಾದಗಳನ್ನು ವಿಸ್ತರಿಸುತ್ತಾ, ಮೊದಲಿಗೆ, ಅಧಿವಿಚಾರಣಾ ನ್ಯಾಯಾಲಯವು, ನ್ಯಾಯಾಲಯ ಮತ್ತು ಆರ್‌ಪಿಎಡಿ ಮೂಲಕ ಎರಡು ನೋಟೀಸನ್ನು ಹೊರಡಿಸಲು ಆದೇಶಿಸಿರುತ್ತದೆ. ಆದಾಗ್ಯೂ, ಅರ್ಜಿದಾರರು 'ನಿರಾಕರಿಸಿರುತ್ತಾರೆ' ಎಂಬ ಅಂಚೆಯ ಹಿಂಬರಹದ ಆಧಾರದ ಮೇಲೆ ಮಾತ್ರ ಯುಕ್ತವಾದ ಸೇವೆಯನ್ನು ನೀಡಲಾಗಿರುತ್ತದೆ. ಹಾಗಾಗಿ, ಅರ್ಜಿದಾರರಿಗೆ ಸಲ್ಲಿಸಬೇಕಾಗಿದ್ದ ಸೇವೆಯು ದಂಡ ಪ್ರಕ್ರಿಯಾ ಸಂಹಿತೆಯ 67ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿರುವಂತೆ ಪೂರ್ಣಗೊಂಡಿರುವುದಿಲ್ಲವೆಂದು ನಿವೇದಿಸಿಕೊಂಡಿರುತ್ತಾರೆ. ಮುಂದುವರೆದು, ದಂಡ ಪ್ರಕ್ರಿಯಾ ಸಂಹಿತೆಯ 126(2)ನೇ ಪ್ರಕರಣದಡಿಯಲ್ಲಿ, ಸಾಕ್ಷ್ಯವನ್ನು, ಜೀವನಾಂಶದ ಆದೇಶವನ್ನು ಯಾವ ವ್ಯಕ್ತಿಯ ವಿರುದ್ಧ ಮಾಡಬೇಕೆಂದು ಪ್ರಸ್ತಾಪಿಸಲಾಗುತ್ತದೋ ಆ ವ್ಯಕ್ತಿಯ ಸಮ್ಮುಖದಲ್ಲಿಯೇ ದಾಖಲಿಸಬೇಕಾಗಿದ್ದು, ಒಂದು ವೇಳೆ ಆತನ ಖುದ್ದು ಹಾಜರಾತಿಯು ಸಾಧ್ಯವಾಗದಿದ್ದ ಪಕ್ಷದಲ್ಲಿ, ಆತನ ನ್ಯಾಯವಾದಿಯ ಸಮ್ಮುಖದಲ್ಲಿ ಸಾಕ್ಷ್ಯವನ್ನು ದಾಖಲಿಸಬೇಕಾಗಿರುತ್ತದೆಂದೂ ವಾದಿಸಿರುತ್ತಾರೆ. ತನ್ನ

ವಾದಗಳಿಗೆ ಪೂರಕವಾಗಿ ಇವರು, ***ವರದಿಯಾದ ಸರ್ಕಾರ –ವಿರುದ್ಧ– ಭೀಮರಾವ್ ಮತ್ತು ಮತ್ತೊಬ್ಬರು***[1], ಹಾಗೂ ***ಭೀಮಪ್ಪ ಗಂಗಪ್ಪ –ವಿರುದ್ಧ– ಇಂದಿರಾಬಾಯಿ***[2] ಪ್ರಕರಣಗಳಲ್ಲಿನ ಈ ನ್ಯಾಯಾಲಯದ ಎರಡು ತೀರ್ಪುಗಳನ್ನು ಉದಾಹರಿಸಿರುತ್ತಾರೆ.

7. ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರ ನಿವೇದನೆಗಳನ್ನು ಹಾಗೂ ಪರಿಶೀಲಿಸಿದ ದಾಖಲೆಗಳನ್ನು ನಾನು ಎಚ್ಚರಪೂರ್ವಕವಾಗಿ ಗಮನಿಸಿರುತ್ತೇವೆ.

8. ಕುಟುಂಬ ನ್ಯಾಯಾಲಯದ ಎದುರು ಅನುಸರಿಸಬೇಕಾದ ನಡಾವಳಿಯನ್ನು ಕುಟುಂಬ ನ್ಯಾಯಾಲಯಗಳು, 1984ರ IV ಅಧ್ಯಾಯದಲ್ಲಿನ 10ನೇ ಪ್ರಕರಣದ ಮೂಲಕ ನಿಯಂತ್ರಿಸಲಾಗುತ್ತದೆ.

> ***10. ಪ್ರಕ್ರಿಯೆ ಸಾಮಾನ್ಯವಾಗಿ.–*** *ಈ ಅಧಿನಿಯಮದ ಇತರ ಉಪಬಂಧಗಳು ಹಾಗೂ ನಿಯಮಗಳಿಗೊಳಪಟ್ಟು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳು ಕುಟುಂಬ ನ್ಯಾಯಾಲಯದ ಮುಂದಿರುವ (ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ IXನೇ ಅಧ್ಯಾಯದ ಮೇರೆಗಿನ ವ್ಯವಹರಣೆಯನ್ನು ಹೊರತುಪಡಿಸಿ) ದಾವೆಗಳು ಮತ್ತು ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು ಮತ್ತು ಆ ಸಂಹಿತೆಯ ಸದರಿ ಉಪಬಂಧಗಳ ಉದ್ದೇಶಗಳಿಗಾಗಿ ಕುಟುಂಬ ನ್ಯಾಯಾಲಯವನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು ಹಾಗೂ ಅದು ಅಂಥ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು.*
>
> *(2) ಈ ಅಧಿನಿಯಮದ ಇತರ ಉಪಬಂಧಗಳು ಮತ್ತು ನಿಯಮಗಳಿಗೊಳಪಟ್ಟು, ದಂಡ ಪ್ರಕ್ರಿಯಾ ಸಂಹಿತೆ, 1973*

1. ಎಐಆರ್ 1963 ಮೈಸೂರು 239  2. 1981 ಕೆಎಆರ್ ಎಲ್.ಜೆ. 353

*(1974ರ 2)ರ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು, ಕುಟುಂಬ ನ್ಯಾಯಾಲಯದ ಮುಂದಿರುವ, ಈ ಸಂಹಿತೆಯ IXನೇ ಅಧ್ಯಾಯದ ಮೇರೆಗಿನ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು.*

*XXX XXX XXX*

9. ಮೇಲಿನ ಉಪಬಂಧದ ಎಚ್ಚರಿಕೆಯ ಓದು, ದಂಡ ಪ್ರಕ್ರಿಯಾ ಸಂಹಿತೆಯ ಅಧ್ಯಾಯದಡಿಯಲ್ಲಿ ಆರಂಭಿಸಿದಂಥ ಪ್ರಕ್ರಿಯೆಗಳನ್ನು ಹೊರತುಪಡಿಸಿದ ನಡಾವಳಿಗಳನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರಿಂದ ನಿಯಂತ್ರಿಸತಕ್ಕದ್ದೆಂಬುದನ್ನು ತೋರಿಸುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣವು ದಂಡ ಪ್ರಕ್ರಿಯಾ ಸಂಹಿತೆಯ IXನೇ ಅಧ್ಯಾಯದ ವ್ಯಾಪ್ತಿಯೊಳಗೆ ಬರುತ್ತದೆಂಬುದನ್ನು ಗಮನಿಸಬೇಕಾಗಿರುತ್ತದೆ. ಆದ್ದರಿಂದ ಸ್ವಾಭಾವಿಕ ಉಪ ಸಿದ್ಧಾಂತಗಳಿಂದ, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದಡಿಯಲ್ಲಿ ಎಲ್ಲಾ ನಡಾವಳಿಗಳನ್ನು ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಒಳಗೊಂಡಿರುವ ಉಪಬಂಧಗಳೊಂದಿಗೆ ಹೊಂದಾಣಿಕೆಯನ್ನು ಮಾಡಬೇಕಾಗಿರುತ್ತದೆ.

10. ಒಪ್ಪಿಕೊಂಡಂತೆ, ಕುಟುಂಬ ನ್ಯಾಯಾಲಯ, ಬೆಳಗಾವಿ ಇಲ್ಲಿ ನಡಾವಳಿಗಳನ್ನು ಆರಂಭಿಸಲಾಗಿರುತ್ತದೆ. ಅರ್ಜಿದಾರರು ಗೋಖಾಕ್ ತಾಲ್ಲೂಕಿನಲ್ಲಿನ ಮರಡಿಮಠ (ಕೊಣ್ಣೂರು)ದ ನಿವಾಸಿಯಾಗಿರುತ್ತಾರೆ. ಆದ್ದರಿಂದ ಅರ್ಜಿದಾರರ ನಿವಾಸವು ನ್ಯಾಯಾಲಯವಿರುವ ಬೆಳಗಾವಿಯ ಸ್ಥಳೀಯ ಮಿತಿಯಿಂದ ಹೊರಗಿರುವುದು ಸ್ಪಷ್ಟವಾಗಿದೆ. ಹಾಗಾಗಿ, ದಂಡ ಪ್ರಕ್ರಿಯಾ ಸಂಹಿತೆಯ 67ನೇ ಪ್ರಕರಣವು ಅನ್ವಯವಾಗುತ್ತಿದ್ದು, ಅದು ಈ ಮುಂದಿನಂತಿರುತ್ತದೆ.

***67. ಸ್ಥಳೀಯ ಪರಿಮಿತಿಗಳ ಹೊರಗೆ ಸಮನು ಜಾರಿ.–*** *ನ್ಯಾಯಾಲಯವು ತಾನು ಹೊರಡಿಸಿದ ಸಮನನ್ನು ತನ್ನ ಸ್ಥಳೀಯ ಅಧಿಕಾರ ವ್ಯಾಪ್ತಿಯ ಹೊರಗಿನ ಯಾವುದೇ ಸ್ಥಳದಲ್ಲಿ ಜಾರಿ*

> *ಮಾಡತಕ್ಕದ್ದೆಂದು, ಅಪೇಕ್ಷಿಸಿದರೆ, ಯಾರ ಸ್ಥಳೀಯ ಅಧಿಕಾರಿ ವ್ಯಾಪ್ತಿಯೊಳಗೆ ಸಮನು ಮಾಡಲಾದ ವ್ಯಕ್ತಿಯು ವಾಸಿಸುವನೋ ಅಥವಾ ಇರುವನೋ ಆ ಮ್ಯಾಜಿಸ್ಟ್ರೇಟನಿಗೆ ಅಲ್ಲಿ ಜಾರಿ ಮಾಡುವುದಕ್ಕೋಸ್ಕರ ಕಳುಹಿಸತಕ್ಕದ್ದು; ಸಾಮಾನ್ಯವಾಗಿ ಅಂತಹ ಸಮನನ್ನು ದ್ವಿಪ್ರತಿಯಲ್ಲಿ ಕಳುಹಿಸತಕ್ಕದ್ದು.*

11. ಹಾಗಾಗಿ, ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದಡಿಯಲ್ಲಿನ ನಡಾವಳಿಗಳಲ್ಲಿ, ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಹೊರಗಡೆ ಇರುವಂಥ ಪ್ರತ್ಯರ್ಜಿದಾರರಿಗೆ ಸಮನುಗಳನ್ನು, ದಂಡ ಪ್ರಕ್ರಿಯಾ ಸಂಹಿತೆಯ 67ನೇ ಪ್ರಕರಣಕ್ಕನುಸಾರವಾಗಿ ಜಾರಿ ಮಾಡಬೇಕು. ಅಧಿವಿಚಾರಣಾ ನ್ಯಾಯಾಲಯವು, ನ್ಯಾಯಾಲಯದ ಮೂಲಕ ಇಲ್ಲಿನ ಅರ್ಜಿದಾರರಿಗೆ ನೋಟೀಸು ನೀಡಿರುವುದನ್ನು ಸದರಿ ನೋಟಿಸನ್ನು ಕಳುಹಿಸಿರುವುದಕ್ಕೆ ಸಂಬಂಧಿಸಿದ ಅಂಶಗಳೊಂದಿಗೆ ದಾಖಲಿಸಿರಲೇ ಬೇಕಾಗಿರುತ್ತದೆ. ನೋಟೀಸನ್ನು ಜಾರಿ ಮಾಡಿರುವುದಕ್ಕೆ ಆಧಾರವಾಗಿ ಅಂಚೆಯ ಹಿಂಬರಹ ಇದ್ದಾಗ್ಯೂ, ಇದು, ದಂಡ ಪ್ರಕ್ರಿಯಾ ಸಂಹಿತೆಯ 10ನೇ ಪ್ರಕರಣದೊಂದಿಗೆ ಓದಲಾದ ಕುಟುಂಬ ನ್ಯಾಯಾಲಯಗಳ ಅಧಿನಿಯಮದ ಪ್ರಕರಣದಲ್ಲಿ ಒಳಗೊಂಡ ಕಾರ್ಯ ವಿಧಾನಕ್ಕೆ ಪ್ರತಿಯಾಗಿರುತ್ತದೆ. ಪೂರ್ವೋಕ್ತ ಹೇಳಿಕೆಯ ಹಿನ್ನೆಲೆಯಲ್ಲಿ, ಅಂಚೆ ಹಿಂಬರಹದ ಆಧಾರದ ಮೇಲೆ ಅರ್ಜಿದಾರರನ್ನು ಏಕಪಕ್ಷಕಾರನೆಂದು ವಾದ ಮಂಡಿಸುವುದು ಕಾನೂನಿನಲ್ಲಿ ಅನೂರ್ಜಿತವಾಗಿರುತ್ತದೆ.

12. ಅರ್ಜಿದಾರರ ಎರಡನೇ ವಾದಕ್ಕೆ ಅಂದರೆ ಸಾಕ್ಷ್ಯವನ್ನು ದಾಖಲಿಸುವುದಕ್ಕೆ ಸಂಬಂಧಿಸಿದಂತೆ ದಂಡ ಪ್ರಕ್ರಿಯಾ ಸಂಹಿತೆಯ 126(2) ಪ್ರಕರಣವನ್ನು ಗಮನಿಸುವುದು ಸೂಕ್ತವಾದುದಾಗಿರುತ್ತದೆ. ಅದು ಈ ಮುಂದಿನಂತಿರುತ್ತದೆ.

> ***126. ಪ್ರಕ್ರಿಯೆ.–*** *(2) ಯಾರ ವಿರುದ್ಧವಾಗಿ ಜೀವನಾಂಶದ ಸಂದಾಯಕ್ಕಾಗಿ ಆದೇಶವನ್ನು ಮಾಡಲು ಪ್ರಸ್ತಾಪಿಸಲಾಗಿದೆಯೋ ಆ ವ್ಯಕ್ತಿಯ ಮುಂದೆ ಅಥವಾ ಅವನು ಖುದ್ದು ಹಾಜರಾಗುವುದನ್ನು ಮನ್ನಾ ಮಾಡಿದ್ದರೆ ಅವನ ವಕೀಲನ ಮುಂದೆ ಅಂತಹ*

*ವ್ಯವಹರಣೆಗಳಲ್ಲಿನ ಎಲ್ಲಾ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಸಮನು ಮೊಕದ್ದಮೆಗಳ ಬಗ್ಗೆ ನಿಯಮಿಸಲಾದ ರೀತಿಯಲ್ಲಿ ಅವುಗಳನ್ನು ಅಭಿಲೇಖಿಸತಕ್ಕದ್ದು:*

*ಪರಂತು, ಜೀವನಾಂಶದ ಸಂದಾಯಕ್ಕಾಗಿ ಯಾವ ವಿರುದ್ಧವಾಗಿ ಆದೇಶವನ್ನು ಮಾಡಲು ಪ್ರಸ್ತಾಪಿಸಲಾಗಿದೆಯೋ ಆ ವ್ಯಕ್ತಿಯು ಜಾರಿಯನ್ನು ಬುದ್ಧಿಪೂರ್ವಕವಾಗಿ ತಪ್ಪಿಕೊಳ್ಳುತ್ತಿದ್ದಾನೆಂದು ಅಥವಾ ನ್ಯಾಯಾಲಯದಲ್ಲಿ ಹಾಜರಾಗಲು ಬುದ್ಧಿಪೂರ್ವಕವಾಗಿ ನಿರ್ಲಕ್ಷ್ಯ ಮಾಡುತ್ತಿದ್ದಾನೆಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಆ ಮ್ಯಾಜಿಸ್ಟ್ರೇಟನು ಏಕಪಕ್ಷೀಯವಾಗಿ ಮೊಕದ್ದಮೆಯನ್ನು ವಿಚಾರಿಸಲು ಮತ್ತು ತೀರ್ಮಾನಿಸಲು ಉದ್ಯುಕ್ತನಾಗಬಹುದು ಮತ್ತು ಹಾಗೆ ಮಾಡಲಾದ ಯಾವುದೇ ಆದೇಶವನ್ನು ಅದರ ದಿನಾಂಕದಿಂದ ಮೂರು ತಿಂಗಳೊಳಗೆ ಮಾಡಿದ ಆವೇದನದಲ್ಲಿ ತೋರಿಸಿದ ಉಚಿತ ಕಾರಣಕ್ಕಾಗಿ ಮ್ಯಾಜಿಸ್ಟ್ರೇಟನು ನ್ಯಾಯೋಚಿತ ಮತ್ತು ಸೂಕ್ತವೆಂದು ಆಲೋಚಿಸುವಂತಹ ಖರ್ಚುಗಳನ್ನು ಎದುರು ಪಕ್ಷಕಾರನಿಗೆ ಸಂದಾಯ ಮಾಡಬೇಕೆನ್ನುವ ನಿಬಂಧನೆಗಳನ್ನೊಳಗೊಂಡಂಥ ನಿಬಂಧನೆಗಳಿಗೊಳಪಟ್ಟು ರದ್ದುಮಾಡಬಹುದು.*

*(ಇದಕ್ಕೆ ನನ್ನಿಂದ ಒತ್ತು ನೀಡಲಾಗಿರುತ್ತದೆ)*

13. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 126(2)ನೇ ಪ್ರಕರಣದ ಉಪಬಂಧವು, ಜೀವನಾಂಶದ ಸಂದಾಯಕ್ಕಾಗಿ ಯಾರ ವಿರುದ್ಧವಾಗಿ ಆದೇಶವನ್ನು ಮಾಡಲು ಪ್ರಸ್ತಾಪಿಸಲಾಗಿದೆಯೋ ಆ ವ್ಯಕ್ತಿಯು ಜಾರಿಯನ್ನು ಬುದ್ಧಿಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿದ್ದಾನೆಂದು ಅಥವಾ ನ್ಯಾಯಾಲಯದಲ್ಲಿ ಹಾಜರಾಗಲು ಬದ್ಧಿಪೂರ್ವಕವಾಗಿ ನಿರ್ಲಕ್ಷ್ಯ ಮಾಡುತ್ತಿದ್ದಾನೆಂದು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾದರೆ, ಆ ಮ್ಯಾಜಿಸ್ಟ್ರೇಟನು ಏಕಪಕ್ಷೀಯವಾಗಿ ಮೊಕದ್ದಮೆಯ ವಿಚಾರಣೆ ನಡೆಸಬಹುದೆಂಬುದನ್ನು ಸ್ಪಷ್ಟಪಡಿಸುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಧಿವಿಚಾರಣಾ ನ್ಯಾಯಾಲಯವು, ಅರ್ಜಿದಾರನು ಜಾರಿನೋಟೀಸನ್ನು 'ನಿರಾಕರಿಸಿರುತ್ತಾನೆ'ಂಬ ಮಟ್ಟಿಗಿನ

ಅಂಚೆ ಹಿಂಬರಹವನ್ನು ಗಮನದಲ್ಲಿಟ್ಟುಕೊಂಡಿದ್ದರಿಂದ, ಆತನನ್ನು ಏಕಪಕ್ಷಕಾರನನ್ನಾಗಿಸಿರುತ್ತದೆ. ಅರ್ಜಿದಾರ ಇಲ್ಲಿನ ಏಕಪಕ್ಷಕಾರನನ್ನು ಹಾಜರು ಪಡಿಸುವ ಮೊದಲು ದಂಡ ಪ್ರಕ್ರಿಯಾ ಸಂಹಿತೆಯ 126(2)ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಲಾದಂತೆ ಮಾನ್ಯ ಮ್ಯಾಜಿಸ್ಟ್ರೇಟರು ಮನವರಿಕೆ ಮಾಡಿಕೊಂಡಿದ್ದರೆ ಪ್ರಕರಣವು ಮುಂದುವರೆಯುತ್ತಿರಲಿಲ್ಲ. ಮುಂದುವರೆದು, ಅರ್ಜಿದಾರನ ಹಾಜರಿಯನ್ನು ವಿನಾಯತಿಗೊಳಿಸುವ ಯಾವುದೇ ಆದೇಶಕ್ಕೆ ಯಾವುದೇ ಉಲ್ಲೇಖವಿರುವುದಿಲ್ಲ. ಹಾಗಾಗಿ, ಸಾಕ್ಷ್ಯವನ್ನು ಅರ್ಜಿದಾರರ ಗೈರುಹಾಜರಿಯಲ್ಲಿ ದಾಖಲಿಸಲು ಬರುವುದಿಲ್ಲ.

14. ***ಭೀಮಪ್ಪನ ಪ್ರಕರಣದಲ್ಲಿ*** (ಹಿಂದೆ ಹೇಳಿದ) ಈ ನ್ಯಾಯಾಲಯವು, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದಡಿಯಲ್ಲಿನ ನಡಾವಳಿಯಲ್ಲಿ ಪ್ರತ್ಯರ್ಜಿದಾರನನ್ನು ಆತನನ್ನು ಏಕಪಕ್ಷಕಾರನನ್ನಾಗಿ ಹಾಜರುಪಡಿಸುವ ಮೊದಲು ಆತ ಉದ್ದೇಶಪೂರ್ವಕವಾಗಿ ಜಾರಿಯನ್ನು ತಪ್ಪಿಸಿರುತ್ತಾನೆಯೆ ಅಥವಾ ನ್ಯಾಯಾಲಯಕ್ಕೆ ಹಾಜರಾಗಲು ನಿರ್ಲಕ್ಷ್ಯ ತೋರಿಸಿರುತ್ತಾನೆಯೆ ಎಂಬುದನ್ನು ಮ್ಯಾಜಿಸ್ಟ್ರೇಟರು ಮೊದಲು ಮನವರಿಕೆ ಮಾಡಿಕೊಳ್ಳಬೇಕು ಎಂದು ***ಸರ್ಕಾರ –ವಿರುದ್ಧ– ಭೀಮರಾವ್*** ಪ್ರಕರಣ (ಈ ಹಿಂದೆ ಹೇಳಿದ) ದಲ್ಲಿನ ಈ ಮೊದಲ ತೀರ್ಪನ್ನು ಅನುಸರಿಸಿರುತ್ತದೆ.

15. ಪ್ರಸ್ತುತ ಪ್ರಕರಣದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 126(2)ನೇ ಪ್ರಕರಣದಡಿಯಲ್ಲಿ ಉದ್ದೇಶಿಸಲಾದಂತೆ ಮ್ಯಾಜಿಸ್ಟ್ರೇಟರ ಇಂಗಿತವನ್ನು ದಾಖಲಿಸದೆ ಇವರಿಂದ ಅರ್ಜಿದಾರರನ್ನು ಏಕಪಕ್ಷಕಾರರಂತೆ ತೀರ್ಮಾನಿಸಿ, ಅವರ ಗೈರುಹಾಜರಿಯಲ್ಲಿ ಸಾಕ್ಷ್ಯವನ್ನು ದಾಖಲಿಸಲಾಗಿರುತ್ತದೆ.

16. ಆದ್ದರಿಂದ, ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯದ ಮುಂದಿದ್ದ ನಡಾವಳಿಗಳನ್ನು ಎರಡು ವ್ಯಾಜ್ಯಾಂಶಗಳು, ಅಂದರೆ (i) ದಂಡ ಪ್ರಕ್ರಿಯಾ ಸಂಹಿತೆಯ 67ನೇ ಪ್ರಕರಣದ ಅನನುಪಾಲನೆಯಿಂದಾಗಿ ಜಾರಿಯಲ್ಲಿ ಅಕ್ರಮ; ಹಾಗೂ (ii) ದಂಡ ಪ್ರಕ್ರಿಯಾ ಸಂಹಿತೆಯ 126(2)ನೇ ಪ್ರಕರಣದ ಅನನುಪಾಲನೆಯಿಂದಾಗಿ ಸಾಕ್ಷ್ಯವನ್ನು ದಾಖಲಿಸುವಲ್ಲಿ ಅಕ್ರಮ, ಇವುಗಳು ಹಾಳು ಮಾಡಿವೆ. ತದನುಸಾರವಾಗಿ, ಪ್ರಶ್ನಿತ ಆದೇಶವು ಕಾನೂನಿನಲ್ಲಿ

ಸಮರ್ಥನೀಯವಾಗಿರುವುದಿಲ್ಲ. ಹಾಗಾಗಿ, ಈ ಅರ್ಜಿಯನ್ನು ಉತ್ತಮ ಪರಿಶೀಲನಾಂಶಗಳೊಂದಿಗೆ ಪರಿಗಣಿಸಲಾಗಿರುತ್ತದೆ.

17. ಅಂತಿಮವಾಗಿ,

(i) ಕುಟುಂಬ ನ್ಯಾಯಾಲಯ, ಬೆಳಗಾವಿ ಇವರು ಹೊರಡಿಸಿದ 23.12.2015ರ ಆದೇಶವನ್ನು ರದ್ದುಪಡಿಸಲಾಗಿದೆ;

(ii) ಈ ಆದೇಶದಲ್ಲಿ ನೀಡಿದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳಿಗನುಸಾರವಾಗಿ ಕಟ್ಟುನಿಟ್ಟಾಗಿ ನೋಟೀಸನ್ನು ನೀಡುವ ಹಂತದಿಂದ ನಡಾವಳಿಗಳೊಂದಿಗೆ ಮತ್ತೆ ಮುಂದುವರೆಯಲು ಕುಟುಂಬ ನ್ಯಾಯಾಲಯಕ್ಕೆ ಈ ವಿಷಯವನ್ನು ಹಿಂದಕ್ಕೆ ಕಳುಹಿಸಲಾಗಿದೆ.

(iii) ದಂಡ ಪ್ರಕ್ರಿಯಾ ಸಂಹಿತೆಯ 125ನೇ ಪ್ರಕರಣದಡಿಯಲ್ಲಿ ವಿಷಯಗಳನ್ನು ನಿರ್ವಹಿಸುವ ನ್ಯಾಯಾಲಯಗಳಿಗೆ ಈ ಆದೇಶದ ಪ್ರತಿಯನ್ನು ಕಳುಹಿಸಲು ರಿಜಿಸ್ಟರಿಗೆ ನಿರ್ದೇಶಿಸಲಾಗಿರುತ್ತದೆ.

ಯಾವುದೇ ವೆಚ್ಚಗಳಿಲ್ಲದೆ ಅರ್ಜಿಯನ್ನು ವಿಲೆಗೊಳಿಸಿದೆ.